ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು) :

ಅ) ಬಂದಿದೆ.

ಆ) ದಿನಾಂಕ: 24.07.2012ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವ ಸಾಲ ಮನ್ನಾ ಯೋಜನೆಯ ರೀತ್ಯಾ ಅರ್ಹವಿದ್ದಲ್ಲಿ ಈ ಬಗ್ಗೆ ಹೊರಡಿಸುವ ಸರ್ಕಾರಿ ಆದೇಶಕ್ಕೊಳಪಟ್ಟು ಮನ್ನಾ ಮಾಡಲಾಗುವುದು.

ರಸ್ತೆ ಅಗಲೀಕರಣ

474 (645) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಸಕಲೇಶಪುರ ಪಟ್ಟಣ ಸರಹದ್ದಿನಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿ ತುಂಬಾ ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಕಳೆದ ನಾಲ್ಕು ವರ್ಷದಲ್ಲಿ ಈ ಜಾಗದಲ್ಲಿ 154 ಅಪಘಾತಗಳು ಸಂಭವಿಸಿದ್ದು, 14 ಜನರು ಮರಣ ಹೊಂದಿರುವುದು ನಿಜವೇ;

ಇ) ವಾಹನ ಹಾಗೂ ದಟ್ಟವಾದ ಜನಸಂದಣಿಯಿಂದಾಗಿ ಅಪಘಾತಗಳು ಉಂಟಾಗುವುದನ್ನು ತಡೆಯಲು ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗುವುದು; (ಪೂರ್ಣ ಮಾಹಿತಿ ನೀಡುವುದು);

ಉ) ವಾಹನ ಸಂಖ್ಯೆ ಮತ್ತು ಜನಸಂಖ್ಯೆ ಹೆಚ್ಚಿರುವುದರಿಂದ ಹಾಲಿ ರಸ್ತೆಯನ್ನು ಅಗಲೀಕರಣ ಮಾಡುವುದು ಸೂಕ್ತವಲ್ಲವೇ; ಹಾಗಿದ್ದಲ್ಲಿ, ರಸ್ತೆ ಅಗಲೀಕರಣ ಮಾಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸಕಲೇಶಪುರ ಪಟ್ಟಣ ಸರಹದ್ದಿನಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿ ತುಂಬಾ ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಹಾಸನ ಜಿಲ್ಲೆ ಸಕಲೇಶಪುರ ಪಟ್ಟಣದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–48 ರಸ್ತೆಯು ಹಾಯ್ದು ಹೋಗಿದ್ದು ಅದರ ಸರಪಳಿಯ ಕಿ.ಮೀ.

222.00 ರಲ್ಲಿ ಪ್ರಾರಂಭವಾಗಿ ಕಿ.ಮೀ. 225.60 ವರೆಗೆ ಇದ್ದು ಇದರ ಒಟ್ಟು ಉದ್ದ 3.60 ಕಿ.ಮೀ ಇರುತ್ತದೆ. ಈ ಭಾಗದ ರಸ್ತೆಯು 7.00 ರಿಂದ 12.00 ಮೀ. ಅಗಲದ ಡಾಂಬರೀಕರಣ ಮೇಲ್ಮೈ ಹೊಂದಿರುತ್ತದೆ.

ಸಕಲೇಶಪುರ ಪಟ್ಟಣದ ವ್ಯಾಪ್ತಿಯಲ್ಲಿರುವ ದಟ್ಟವಾದ ವಾಹನ ಸಂಚಾರವನ್ನು ತಪ್ಪಿಸಲು ಸಕಲೇಶಪುರ ಹೊರ ವಲಯ ರಸ್ತೆಯನ್ನು ಅಂದರೆ ಕಿ.ಮೀ. 221.00 ರಿಂದ ಕಿ.ಮೀ 225.00 ರವರೆಗೆ ಹೇಮಾವತಿ ನದಿಗೆ ಹೊಸದಾಗಿ ಬೃಹತ್ ಸೇತುವೆ ಸೇರಿಸಿದಂತೆ ನಿರ್ಮಿಸಲು ಉದ್ದೇಶಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ರೂ.48.00 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: CNH/TA-1/AE2/NH-48/ Sakleshapura-Bypass/2010-11 Dtd: 29th March, 2011 ರನ್ವಯ ಸಲ್ಲಿಸಲಾಗಿತ್ತು.

ಆದರೆ, ಕೇಂದ್ರ ಭೂಸಾರಿಗೆ ಮಂತ್ರಾಲಯವು ಪತ್ರ ಸಂಖ್ಯೆ RW/12014/56/2010-KNT Dtd: 6th April, 2011 ರಲ್ಲಿ ರಾಷ್ಟ್ರೀಯ ಹೆದ್ದಾರಿ–48ರ ಹಾಸನದಿಂದ ಬಿ.ಸಿ. ರಸ್ತೆಯವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು NHDP-IVB ಅಡಿಯಲ್ಲಿ ಅಭಿವೃದ್ಧಿಗೊಳಿಸಲು ಈಗಾಗಲೇ ಯೋಜಿಸಲಾಗಿದ್ದು, ಸಕಲೇಶಪುರ ಪಟ್ಟಣಕ್ಕೆ ಹೊರ ವಲಯ ರಸ್ತೆ ನಿರ್ಮಾಣವು ಸಹ ಸದರಿ ಯೋಜನೆ ಅಡಿಯಲ್ಲಿ (NHDP-IVB) ಒಳಗೊಂಡಿರುವುದಾಗಿ ತಿಳಿಸಿ, ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರು ಇವರಿಂದ ಸಲ್ಲಿಸಲಾಗಿದ್ದ ಸಕಲೇಶಪುರ ಹೊರ ವಲಯ ರಸ್ತೆ ನಿರ್ಮಾಣದ ಪ್ರಸ್ತಾವನೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಮಂಜೂರಾತಿ ದೊರೆತಿರುವುದಿಲ್ಲ.

ಈ) ದಿನಾಂಕ: 06–06–2011 ರಂದು NHDP-IVB ರ ಅಡಿಯಲ್ಲಿ ಅಭಿವೃದ್ಧಿಗೊಳಿಸಲು ಯೋಜಿಸಿರುವ ಪ್ರಸ್ತಾವನೆ ಕುರಿತಂತೆ "tripartite agreement" ನ್ನು ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ಮಂಗಳೂರು, ಮೆ:ಫೀಡ್ ಬ್ಯಾಕ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಹಾಗೂ ಮುಖ್ಯ ಪ್ರಧಾನ ವ್ಯವಸ್ಥಾಪಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಬೆಂಗಳೂರು ಇವರುಗಳು ಸಹಿ ಮಾಡಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹಾಸನದಿಂದ ಬಿ.ಸಿ. ರಸ್ತೆಯವರೆಗೆ (ಕಿ.ಮೀ. – 189.50 ರಿಂದ ಕಿ.ಮೀ. 328.00 ವರೆಗೆ) ನಾಲ್ಕು ಪಥದ ರಸ್ತೆಯನ್ನು ನಿರ್ಮಿಸುವ ಬಗ್ಗೆ ಸರ್ವೆ, ಯೋಜನೆ, ವಿನ್ಯಾಸ ಹಾಗೂ ವಿವರವಾದ ಯೋಜನಾ ವರದಿ (D.P.R) ಯನ್ನು ಸಮಾಲೋಚಕರಿಂದ ಪಡೆಯಲು ಕ್ರಮ ಕೈಗೊಂಡಿರುತ್ತಾರೆ. ನಿಯಮಾನುಸಾರ ಸಕ್ರಮ ಪ್ರಾಧಿಕಾರ ದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾಗುವುದು.

ಉ) ಸಕಲೇಶಪುರ ಪಟ್ಟಣದ ಹಾಲಿ ರಸ್ತೆಯನ್ನು ಅಗಲೀಕರಣ ಗೊಳಿಸುವ ಪ್ರಸ್ತಾವನೆಯು ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸಧ್ಯದ ಪರಿಗಣನೆಯಲ್ಲಿ ಇರುವುದಿಲ್ಲ.

S.H. ನ್ನು N.H. ಗೆ ಪರಿವರ್ತಿಸುವುದು

463 (625) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ತೀರ್ಥಹಳ್ಳಿ N.H.-13 ರ ಕೊಪ್ಪ ಸರ್ಕಲ್‌ನಿಂದ ರಾಜ್ಯ ಹೆದ್ದಾರಿ ಮೇಗರವಳ್ಳಿ, ಆಗುಂಬೆ, ಹೆಬ್ರಿ, ಮಣಿಪಾಲ ಮಾರ್ಗವಾಗಿ ಉಡುಪಿ N.H.-17 ರಲ್ಲಿ ಸೇರುವ ಒಟ್ಟು 90 K.M., ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಯನ್ನಾಗಿ ಪರಿವರ್ತಿಸಲು ಕೋರಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪರಿವರ್ತನೆಗೆ ಸಮ್ಮತಿ ನೀಡಲಾಗಿದೆಯೇ;

ಇ) ಸಮ್ಮತಿಸಿಲ್ಲದಿದ್ದಲ್ಲಿ, ಇರುವ ತೊಡಕುಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ತೀರ್ಥಹಳ್ಳಿಯಲ್ಲಿ ರಾಷ್ಟ್ರೀಯ ಹೆದ್ದಾರಿ–13ರ ಕೊಪ್ಪ ಸರ್ಕಲ್ ನಿಂದ ಆಗುಂಬೆ, ಹೆಬ್ರಿ, ಮಣಿಪಾಲ ಮಾರ್ಗವಾಗಿ ಉಡುಪಿಯ ಬಳಿ ರಾಷ್ಟ್ರೀಯ ಹೆದ್ದಾರಿ–17ನ್ನು ಸೇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಯನ್ನಾಗಿ ಮೇಲ್ದರ್ಜೆಗೇರಿಸುವ ಕೋರಿಕೆಯ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.